ಅಧ್ಯಕ್ಷರು : ಈ ಪ್ರಶ್ನೆ ಬಂದಿರುವುದರಿಂದ ಈಗ ಸಾರ್ವಜನಿಕರಿಗೆ ಗೊತ್ತಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಅಲ್ಲಿ ಬಹಳ ದೊಡ್ಡ ಬಿಲ್ಡಿಂಗ್ ಇದೆ. ಸೆಂಟ್ರಲ್ ಬಸ್ ಸ್ಟ್ಯಾಂಡ್ ಆಫ್ಪೋಸಿಟ್‌ನಲ್ಲಿ ಈ ಬಿಲ್ಡಿಂಗ್ ಇದೆ. ಅಲ್ಲಿ ಬಾರ್ ಅಷ್ಟೇ ಅಲ್ಲ, ಸಾಕಷ್ಟು ಅಂಗಡಿಗಳಿವೆ. ಹನುಮಣ್ಣನವರ್ ಯಾವುದೂ ಅಂಗಡಿ ನಡೆಸುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಬಾರ್ ಷಾಪ್ ಸಹ ಹನುಮಣ್ಣನವರ್ ನಡೆಸುತ್ತಿಲ್ಲ. ಅಲ್ಲಿ ಲೀಸ್‌ನಲ್ಲಿ ಸಬ್‌ಲೀಸ್ ಆಗಿದೆ. You have to verify this fact.

ಎರಡನೆಯದಾಗಿ, ಅಲ್ಲಿ ಮಂತ್ರಿಗಳಿಗೆ ಏನು ತೊಂದರೆ ಎಂದರೆ ದಿವಂಗತ ಹನುಮಣ್ಣನವರು ಬಹಳ ಸೀನಿಯರ್. ಅವರ ಬಗ್ಗೆ ಗೌರವ ಇದೆ. He was a very senior party worker of your party and he was the Chairman of the City Improvement Board.

ಅಧ್ಯಕ್ಷರು : ನೀವು ಅಧಿಕಾರದಲ್ಲಿ ಇದ್ದಾಗ ತೆಗೆಸಬಹುದಿತ್ತಲ್ಲವೇ?

Sri R.V. DESHPANDE : ಲಾಸ್ಟ್ ಟೈಮ್ ಮಾನ್ಯ ಬಾಬಾಗೌಡರು ರೈಸ್ ಮಾಡಿದಾಗ, I was under the impression that the building belonged to Hanumannavar. None of the buildings have been run by Hanumannavar and the bar is not by Hanumannavar. It was sub-leased. ಇಲ್ಲಿ ಲೀಸ್‌ಗೆ ಸಬ್ ಲೀಸ್ ಆಗಿದೆ ಎಂದು ಹೇಳುತ್ತಿದ್ದೇನೆ.

Mr. SPEAKER : You will have to dispel this impression that the Government property cannot be appropriate by an individual either by design or by accident.

ಶ್ರೀ ಎನ್. ಚಿಕ್ಕೇಗೌಡ : ಸಭಾಧ್ಯಕ್ಷರ ಮೂಲಕ ನಾನು ನಮ್ರತೆಯಿಂದ ಕೇಳುತ್ತೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಹಿಂದೆ 1967ರಲ್ಲೇ ಇದು ಆಗಿದೆ. ಹಿಂದೆ ದೇಶಪಾಂಡೆಯವರೇ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಿತ್ತಲ್ಲವೇ?

ಅಧ್ಯಕ್ಷರು : ಮಾನ್ಯ ಹನುಮಣ್ಣನವರದ್ದೇ ಆ ಬಿಲ್ಡಿಂಗ್ ಎಂದು ಅವರು ತಿಳಿದುಕೊಂಡಿದ್ದರು ಎಂದು ಈಗ ತಾನೇ ಹೇಳಿದರು.

ಶ್ರೀ ಆರ್.ವಿ. ದೇಶಪಾಂಡೆ : ಬೆಳಗಾಂನಲ್ಲಿ ಯಾರೇ ಕೇಳಿದರೂ ಅದು ಹನುಮಣ್ಣನವರ ಬಿಲ್ಡಿಂಗ್ ಎಂದೇ ಹೇಳುತ್ತಾರೆ. Till Sri Babagowda raised it, we were not aware that this building belongs to the Government. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಲೀಸ್‌ನಲ್ಲಿ ಸಬ್‌ಲೀಸ್ ಆಗಿದೆ. Hanumannavar's son was my classmate and we were under the impression that the building belongs to them.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ನೀರಾವರಿ ಕೆರೆಗಳ ದುರಸ್ತಿ

2066 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳು ಹಾಗೂ ಅಣೆಕಟ್ಟುಗಳ ಸಂಖ್ಯೆ ಎಷ್ಟು?

ಆ) ಈ ಸಾರಿ ಭಾರಿ ಮಳೆಯಿಂದ ಇವುಗಳಿಗೆ ಹಾನಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹಾನಿಗೊಂಡಿರುವ ಕೆರೆ, ಅಣೆಕಟ್ಟುಗಳ ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ. ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವ ಅಣೆಕಟ್ಟುಗಳು ಎರಡು. (1) ಕೋವಿ ಪಿಕಪ್ ಚಾನಲ್ (2) ಮುರುಡನಕೆರೆ ಚಾನಲ್.

ಆ) ಯಾವ ಹಾನಿಯೂ ಆಗಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಭಾರಿ ನೀರಾವರಿ ಯೋಜನೆಗಳು

2127 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) 1989 ರಿಂದ 1991 ರವರೆಗೆ ರಾಜ್ಯದಲ್ಲಿ ಹೊಸದಾಗಿ ಮಂಜೂರಾದ ಭಾರಿ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು? (ಅವುಗಳ ಹೆಸರುಗಳನ್ನೊಳಗೊಂಡ ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)?

ಆ) ಪ್ರತಿಯೊಂದು ನೀರಾವರಿ ಯೋಜನೆಗಳಿಗೆ ತಗಲುವ ವೆಚ್ಚ ಎಷ್ಟು?

ಇ) ಇದರ ಜಾರಿಗಾಗಿ ಈಗಾಗಲೇ ಬಿಡುಗಡೆ ಮಾಡಲಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು?

ಈ) ಈ ಯೋಜನೆಗಳ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಇವುಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಯಾವುದೂ ಇಲ್ಲ.

ಇ) ಮೇಲಿನ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ಹಳ್ಳಿ ರಸ್ತೆಗಳ ದುರಸ್ತಿ

2291 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ ನಿಡವಂದದಿಂದ ಮೂವತ್ತೂರು ಗ್ರಾಮಕ್ಕೆ ಹೋಗುವ ರಸ್ತೆ ತೀರ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆ ಕೆಲಸವನ್ನು ದುರಸ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)